‘ಹೀಗೂ ಅಲ್ಲ... ನಾನು ಬರುವವರೆಗೆ ಇಲ್ಲೇ ಇರು.’

‘ತಡಮಾಡಬೇಡಿ ಡಿಯರ್... ಪ್ಲೀಸ್...’ ಮಿಸೆಸ್ ಫೋಸ್ಟರ್ ಗೋಗರೆದಳು.

ಅವಳು ಕಾಯುತ್ತಲೇ ಕುಳಿತಳು.

‘ಡ್ರೈವರ್... ಟೈಮೆಷ್ಟಾಯ್ತು?’

‘ಒಂಬತ್ತುವರೆ ಮೇಡಂ.’

‘ನಾವು ಇನ್ನೊಂದು ಗಂಟೆಯೊಳಗೆ ಏರ್‌ಪೋರ್ಟ್ ತಲುಪಬಹುದೇ ಡ್ರೈವರ್?’

‘ಸ್ವಲ್ಪ ವೇಗವಾಗಿ ಹೋದರೆ ತಲುಪಬಹುದು ಮೇಡಂ.’

ಅಷ್ಟರಲ್ಲಿ, ಮಿಸ್ಟರ್ ಫೋಸ್ಟರ್ ಕುಳಿತ್ತಿದ್ದ ಸೀಟಿನ ಹಿಂಭಾಗದಲ್ಲಿ, ಬಿಳಿ ಕಾಗದದಲ್ಲಿ ಸುತ್ತಿದ್ದ ಒಂದು ವಸ್ತು ಅವರ ಕೈಗೆ ಸಿಕ್ಕಿತು. ಅದನ್ನು ಬೇಕಂತಲೇ ಅಲ್ಲಿ ಸಿಕ್ಕಿಸಿರುವಂತೆ ಆಕೆಗೆ ಕಂಡಿತು.

‘ನೋಡಿಲ್ಲಿ, ಇಲ್ಲಿದೆ! ಡ್ರೈವರ್, ಅವರಿಗೆ ಹೋಗಿ ಹೇಳಪ್ಪ... ಪ್ಲೀಸ್.’

ದೊಡ್ಡವರ ಇಂತಹ ಸಣ್ಣ ಆಟಗಳು ಆ ಐರಿಶ್ ಡ್ರೈವರನಿಗೆ ಕಿಂಚಿತ್ತೂ ಹಿಡಿಸಿರಲಿಲ್ಲವೆಂದು ಅವನ ಮುಖಭಾವದಿಂದಲೇ ಹೇಳಿಬಿಡಬಹುದಿತ್ತು. ಆದರೂ ಅವನು ಕಾರಿನಿಂದಿಳಿದು ಮನೆಯ ಮೆಟ್ಟಿಲುಗಳನ್ನು ಹತ್ತತೊಡಗಿದ. ಅವನು ಬಾಗಿಲನ್ನು ತಟ್ಟಿದ. ಚಿಲಕವನ್ನು ಶಬ್ದ ಮಾಡುತ್ತಾ ಅಲ್ಲಾಡಿಸಿದ. ಒಳಗಿಂದ ಯಾವುದೇ ಉತ್ತರ ಬರಲಿಲ್ಲ. ವಾಪಸ್ಸು ಬಂದು, ‘ಬಾಗಿಲು ಒಳಗಿಂದ ಲಾಕ್ ಆಗಿದೆ ಮೇಡಂ. ನಿಮ್ಮ ಬಳಿ ಕೀ ಇರಬೇಕಲ್ಲವೇ? ನೀವೇ ಒಮ್ಮೆ ಟ್ರೈ ಮಾಡಿ’ ಎಂದ.

‘ಹೌದು, ಹೌದು’ ಆಕೆ ಪರ್ಸನ್ನು ತೆರೆದಳು. ‘ನಾನೇ ಹೋಗುತ್ತೇನೆ. ಅವರು ಎಲ್ಲಿ ಇರುತ್ತಾರೆಂದು ನನಗೇ ಗೊತ್ತು.’

ಮನೆಯ ಕೀಯನ್ನು ಹಿಡಿದುಕೊಂಡೇ ಮಿಸೆಸ್ ಫೋಸ್ಟರ್ ಮೆಟ್ಟಿಲುಗಳನ್ನು ಹತ್ತಿದಳು. ಕೀಯನ್ನು ಬೀಗದೊಳಗೆ ಹಾಕಿದಳು. ತಿರುಗಿಸಬೇಕಷ್ಟೇ!... ಆಕೆ ತಿರುಗಿಸಲಿಲ್ಲ. ಮರಗಟ್ಟಿದಂತಾಗಿ ಸ್ತಬ್ಧಳಾಗಿ ಅಲ್ಲೇ ನಿಂತು ಬಿಟ್ಟಳು. ತಲೆಯನ್ನೊಮ್ಮೆ ಪಕ್ಕಕ್ಕೆ ವಾಲಿಸಿ ಸೂಕ್ಷ್ಮವಾಗಿ ಆಲಿಸಿದಳು... ಐದು... ಆರು... ಏಳು... ಎಂಟು... ಒಂಬತ್ತು... ಹತ್ತು ಸೆಕೆಂಡುಗಳು... ಯಾವುದೋ ಸೂಚನೆಗಾಗಿ ಕಾಯುತ್ತಿರುವಂತೆ ಅವಳ ದೇಹ ಮರಗಟ್ಟಿದಂತಾಗಿತ್ತು.

ಅವಳ ಕಿವಿಗಳು ನೆಟ್ಟಗಾದವು... ಬಾಗಿಲಿಗೆ ಕಿವಿಗೊಟ್ಟು ಸೂಕ್ಷ್ಮವಾಗಿ ಆಲಿಸಿದಳು. ಅವಳ ದೇಹವೇ ಒಂದು ಬೃಹದ್ ಕಿವಿಯಾಯಿತು. ಒಳಗೆ ಹೋಗಲು ತಯಾರಾಗಿದ್ದಳಾದರೂ ಮಿಸೆಸ್ ಫೋಸ್ಟರ್ ಕೊನೆಗೆ ಮನಸ್ಸು ಬದಲಾಯಿಸಿದಳು. ಬೀಗದೊಳಗಿದ್ದ ಕೀಯನ್ನು ಹೊರತೆಗೆದು, ಮೆಟ್ಟಿಲಿಳಿದು ಕಾರಿನ ಬಳಿ ಬಂದಳು.

‘ಅವರನ್ನು ಕಾಯುತ್ತಾ ಕುಳಿತರೆ ನನ್ನ ಫ್ಲೈಟ್ ಖಂಡಿತಾ ಮಿಸ್ಸಾಗುತ್ತದೆ. ನಾವು ಹೊರಡೋಣ. ಬೇಗ.’ ಎಂದಳು ಡ್ರೈವರನಿಗೆ.

ಒಂದು ವೇಳೆ ಡ್ರೈವರನು ಮಿಸೆಸ್ ಫೋಸ್ಟರಳ ಮುಖವನ್ನು ಗಮನವಿಟ್ಟು ನೋಡಿದ್ದಿದ್ದರೆ ಅದು ಬಿಳುಚಿಕೊಂಡಿದ್ದು ನೋಡಿ ಆಶ್ಚರ್ಯಪಡುತ್ತಿದ್ದನೇನೋ!

‘ಡ್ರೈವರ್, ಇನ್ನೂ ಫಾಸ್ಟಾಗಿ... ಬೇಗ, ಬೇಗ’ ಈವರೆಗೆ ಸೌಮ್ಯವಾಗಿದ್ದ ಅವಳ ಅಧಿಕಾರಯುತ ದನಿಯನ್ನು ಕೇಳಿ ಡ್ರೈವರ್ ಒಮ್ಮೆಲೆ ಚಕಿತನಾದ.

‘ಮೇಡಂ, ನಿಮ್ಮ ಯಜಮಾನರು?...’ ಅವನೆಂದ.

‘ಅವರಿಗೆ ಕ್ಲಬ್ಬಿಗಷ್ಟೇ ಹೋಗಲಿಕ್ಕಿರುವುದು. ಅವರಿಗೆ ಬೇಕಾದಷ್ಟು ಪುರುಸೊತ್ತಿದೆ.